## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 22.10.2016ರಂದು ಪೂರ್ವಾಹ್ನ ಗಂಟೆ 10:30ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**I ನಡಾವಳಿಗಳ ದೃಢೀಕರಣ**

ದಿನಾಂಕ 31.08.2016ರಂದು ನಡೆದ 2016ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 30.07.2016ರಂದು ನಡೆದ 2016ನೇ ಸಾಲಿನ ಐದನೇ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:13(2016)

**ವಿಷಯ :** 2016–17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗಿರುವ ಬಿ.ಎಡ್ ಮತ್ತು ಎಂ.ಎಡ್ ಕೋರ್ಸ್ ಸಂಯೋಜಕರ/ಸಲಹೆಗಾರರ ನೇಮಕಾತಿ – ಸಂಭಾವನೆ ಹಾಗೂ ಸೇವಾ ಸೌಲಭ್ಯಗಳನ್ನು ನಿಗದಿಪಡಿಸುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ :** B.Ed. (ODL) ಹಾಗೂ M.Ed(Regular) ಕೋರ್ಸುಗಳಿಗೆ ಸಂಯೋಜಕರನ್ನಾಗಿ ಡಾ.ಚಿದಾನಂದ ಎ.ಎಲ್ ಹಾಗೂ ಶ್ರೀಮತಿ ಡಾ.ಶಶಿಕಲಾ ಇವರನ್ನು ಸಲಹೆಗಾರ (Course Advisor)ರನ್ನಾಗಿ ನೇಮಕ ಮಾಡಿಕೊಳ್ಳುವುದಾಗಿ ಸಭೆಯಲ್ಲಿ ನಿರ್ಣಯಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ:7:1(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಘಟಕ ಕಾಲೇಜುಗಳಿಗೆ ಅಗತ್ಯವಿರುವ UPSಗಳನ್ನು ಖರೀದಿಸಿದ ಬಗ್ಗೆ ಘಟನೋತ್ತರ ಮಂಜೂರಾತಿ ಕುರಿತು.

ಸಭೆಯ ದಿನಾಂಕ: 22.10.2016

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಘಟಕ ಕಾಲೇಜುಗಳಿಗೆ ಅಗತ್ಯವಿರುವ 06 ಸಂಖ್ಯೆಯ UPS ಗಳ ಖರೀದಿಯ ಒಟ್ಟು ವೆಚ್ಚ ರೂ.12,14,533/– ನ್ನು ಘಟನೋತ್ತರವಾಗಿ

ಅನುಮೋದಿಸಲಾಯಿತು. ಅಲ್ಲದೆ ಮುಂದಿನ ಖರೀದಿಗೆ ಹೊಸ ದರ ಪಟ್ಟಿಗಳನ್ನು ಆಹ್ವಾನಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ:7:2(2016)

ವಿಷಯ: ದೂರ ಶಿಕ್ಷಣ ಕೇಂದ್ರಕ್ಕೆ ಅಗತ್ಯವಿರುವ 5 KVA UPS ಮತ್ತು Batteryಯ ಖರೀದಿಗೆ ಮಂಜೂರಾತಿ ಕುರಿತು.

ಸಭೆಯ ದಿನಾಂಕ: 22.10.2016

**ನಿರ್ಣಯ:** ದೂರು ಶಿಕ್ಷಣ ಕೇಂದ್ರಕ್ಕೆ ಬೇಕಾದ 5 KVA UPS ಮತ್ತು Batteryಯನ್ನು ವಿನಿಮಯದಡಿಯಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಅಲ್ಲದೆ ಮುಂದಿನ ಖರೀದಿಗೆ ಹೊಸ ದರ ಪಟ್ಟಿಗಳನ್ನು ಆಹ್ವಾನಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ:7:3(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಮತ್ತು ತೃತೀಯ ವರ್ಷದ ಪದವಿ ಕೋರ್ಸುಗಳ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳ ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ವಿದೇಶಿ ವಿದ್ಯಾರ್ಥಿಗಳ ಪರಿಷ್ಕೃತ ಪ್ರವೇಶಾತಿ ಶುಲ್ಕ ನಿಗದಿಪಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ:7:4(2016)

ವಿಷಯ: ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ – ಡಾ.ರಮೇಶ್ ಸಾಬು ಗಣಿ ಇವರ ಮನವಿ ಬಗ್ಗೆ

ಸಭೆಯ ದಿನಾಂಕ: 22.10.2016

**ನಿರ್ಣಯ:** ಪ್ರಸ್ತುತ ವಿಭಾಗದಲ್ಲಿ ಶಿಕ್ಷಕರ ಕೊರತೆಯಿರುವುದರಿಂದ ಸದರಿಯವರ ಮನವಿಯನ್ನು ಸದ್ಯಕ್ಕೆ ತಡೆಹಿಡಿಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ:7:5(2016)

ವಿಷಯ: ಡಾ. ವಿನಯ್ ರಜತ್ ಡಿ., ಸಹಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಹಿಂದಿನ ಸೇವೆಯನ್ನು ನಿವೃತ್ತಿ ಸೌಲಭ್ಯಕ್ಕೆ ಪರಿಗಣಿಸುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ:7:6(2016)

ವಿಷಯ: ಕಿರಿಯ ಅಭಿಯಂತರ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತಾದ ಕರಡು ಅನುಶಾಸನ

ಸಭೆಯ ದಿನಾಂಕ: 22.10.2016

**ನಿರ್ಣಯ:** ಲಿಫ್ಟ್ ಮೆಕಾನಿಕ್/ಇಲೆಕ್ಟ್ರಿಕಲ್ ವಯರ್ ಮೆನ್/ಇಲೆಕ್ಟ್ರೀಶಿಯನ್/ಪಂಪ್ ಅಪರೇಟರ್/ಮೆಕಾನಿಕ್/ ಫಿಟ್ಟರ್/ಕೇಬಲ್ ಜಾಯಿಂಟರ್ ಮುಂತಾದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಿರಿಯ ಅಭಿಯಂತರ ಹುದ್ದೆಗೆ ಮುಂಭಡ್ತಿ ನೀಡುವ ಬಗ್ಗೆ, ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಿರಿಯ ಅಭಿಯಂತರ ಹುದ್ದೆಗಳ ನೇರ ನೇಮಕಾತಿಗೆ ಅಳವಡಿಸಿರುವ ವಿದ್ಯಾರ್ಹತೆಯ ಮತ್ತು ಇತರ ಅರ್ಹತೆಗಳೊಡನೆ ಅನ್ವಯಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ7:7(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಟ್ರ್ಯಾಕ್ ಸೂಟ್‌ಗಳನ್ನು ಖರೀದಿಸುವ ಪ್ರಸ್ತಾವನೆ – ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** 2015–16ನೇ ಸಾಲಿನ ಅನುಮೋದಿತ ದರದಲ್ಲೇ 2016–17ನೇ ಸಾಲಿಗೂ M/s Sports Line, Mangalore ಇವರಿಂದ ಟ್ರ್ಯಾಕ್ ಸೂಟ್‌ಗಳನ್ನು ಖರೀದಿಸುವ ಪ್ರಸ್ತಾವನೆವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿ.ಇ.ವಿ ಸಾ.ಸ7:8(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಕರ್ನಾಟಕ ಬ್ಯಾಂಕ್‌ನ ಶಾಖೆಯನ್ನು ತೆರೆಯಲು ಅನುಮತಿ ನೀಡುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ7:9(2016)

ವಿಷಯ: ಮೇ/ಜೂನ್ 2016ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ತನಿಖಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ7:10(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಮತ್ತು ರಸಾಯನ ಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗಕ್ಕೆ ಪ್ರೊ.ಸೋಮಣ್ಣ, ಪ್ರಾಧ್ಯಾಪಕರು ಹಾಗೂ ಸ್ನಾತಕೋತ್ತರ ರಸಾಯನ ಶಾಸ್ತ್ರ ಆಧ್ಯಯನ ವಿಭಾಗಕ್ಕೆ ಪ್ರೊ.ಭೋಜ ಪೂಜಾರಿ, ಪ್ರಾಧ್ಯಾಪಕರು ಇವರುಗಳನ್ನು ಸದರಿ ಅಧ್ಯಯನ ವಿಭಾಗಗಳಿಗೆ ದಿನಾಂಕ 01.01.2017ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರುಗಳನ್ನಾಗಿ ನಾಮನಿರ್ದೇಶನ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ7:11(2016)

ವಿಷಯ: ಸ್ನಾತಕೋತ್ತರ ಭೂಗೋಳಶಾಸ್ತ್ರ (Geography) ಅಧ್ಯಯನ ಮಂಡಳಿಯನ್ನು ರಚಿಸುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ಮಂಡಳಿಯನ್ನು ರಚಿಸಿದ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ7:12(2016)

ವಿಷಯ: ಡಾ. ಪುಷ್ಪಾ ಕುಟ್ಟಣ್ಣ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

ಸಭೆಯ ದಿನಾಂಕ: 22.10.2016

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಹೊಸ ಕೋರ್ಸು/ಅಧ್ಯಯನ ವಿಷಯಗಳನ್ನು ಪ್ರಾರಂಭಿಸಿದ್ದು, ವಿಭಾಗಗಳ ಸ್ಥಾಪನೆ, ಶಿಕ್ಷಕರ ಹುದ್ದೆಗಳ ಸೃಷ್ಟಿ ಮತ್ತು ಸೃಜನೆಗೆ ಸಂಬಂಧಿಸಿದಂತೆ ಕ್ರಮಕೈಗೊಳ್ಳಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ7:13(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ದೈಹಿಕ ಮತ್ತು ಕ್ರೀಡಾ ಅಧ್ಯಯನ ವಿಭಾಗಗಕ್ಕೆ ಡಾ.ಜೆರಾಲ್ಡ್ ಸಂತೋಷ್ ಡಿ'ಸೋಜ ಇವರನ್ನು ದಿನಾಂಕ 01.01.2017ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗಾಗಿ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿ.ಇ.ವಿ ಸಾ.ಸ7:14(2016)

ವಿಷಯ: ವ್ಯವಹಾರ ಆಡಳಿತ ವಿಭಾಗ – ಗಣಕಯಂತ್ರ ಪ್ರಯೋಗಾಲಯದ 'PROWESS' Database ವಾರ್ಷಿಕ ಚಂದಾ ನವೀಕರಣ ಶುಲ್ಕ ಪಾವತಿಗೆ ಮಂಜೂರಾತಿ ನೀಡುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಸದರಿ Database ಅಳವಡಿಸಿದ M/s Centre For Monitoring Indian Economy Pvt. Ltd.(CMIE) Mumbai ಇವರು ಏಕೈಕ ನೇರ ಪೂರೈಕೆದಾರರಾಗಿದ್ದು ಡಿಸೆಂಬರ್ 2016ರಿಂದ ನವೆಂಬರ್ 2017ರವರೆಗೆ ವಾರ್ಷಿಕ ಚಂದಾ ನವೀಕರಣ ಶುಲ್ಕ ರೂ.1,38,000/– (ತೆರಿಗೆ ಸೇರಿ) ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ7:15(2016)

ವಿಷಯ: ದಿವಂಗತ ಡಾ. ಕೆ. ಕೆ. ವಿಜಯಲಕ್ಷ್ಮೀ, ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಸೇವಾ ತಡೆ ಇರುವ ಹಂಗಾಮಿ ನೆಲೆಯ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:16

ವಿಷಯ: Asphalting roads in the Quarters at Mangalore University Mangalagangothri

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. ಕನಿಷ್ಠ

ಮೂರು ವರ್ಷಗಳ ಅವಧಿಗೆ ರಸ್ತೆಯ ಉಸ್ತುವಾರಿಯನ್ನು ನೋಡಿಕೊಳ್ಳಬೇಕೆಂಬ ಷರತ್ತನ್ನು ಟೆಂಡರ್‌ನಲ್ಲಿ ಅಳವಡಿಸಲು ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:17(2016)

**ವಿಷಯ:** Construction of Vehicle Shed near existing University vehicle shed at Mangalore University, Mangalagangothri - ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:18(2016)

**ವಿಷಯ:** Construction of Store Room for Bioscience Department and construction of first floor to the Indoor Stadium at Mangalore University, Mangalagangothri - ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:19(2016)

**ವಿಷಯ:** Supplying Installation Commissioning of Package Air conditioner unit to the Animal House at Mangalore University, Mangalagangothri - ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:20(2016)

**ವಿಷಯ:** External Electrification to the Animal House for CARRT Project at Mangalore University, Mangalagangothri - ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:21(2016)

ವಿಷಯ: Construction two class rooms in first floor to the Library Extension building at F.M.K.M.C. College, Madikeri - ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:22(2016)

ವಿಷಯ: Construction of Compound Wall to the F.M.K.M.C. College, Madikeri, Kodagu Dist - ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಆವರಣ ಗೋಡೆಯ ಉದ್ದ ಹಾಗೂ ರಚನೆಯ ಬಗ್ಗೆ ಮಾಹಿತಿಯನ್ನು ಒದಗಿಸುವ ಷರತ್ತಿನ ಮೇರೆಗೆ ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ7:23(2016)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿನ ವಸತಿಗೃಹಗಳ ಮತ್ತು ಮಹಿಳಾ ವಿದ್ಯಾರ್ಥಿ ನಿಲಯಗಳಿಗೆ ಇರುವ ನೀರು ಸರಬರಾಜು ಕೊಳವೆಗಳನ್ನು ಹೊಸದಾಗಿ ಅಳವಡಿಸುವುದು – **ಅಂದಾಜು ಮೊತ್ತ ರೂ. 19,25,000.00**

ಸಭೆಯ ದಿನಾಂಕ: 22.10.2016

**ನಿರ್ಣಯ:** ದಿನಾಂಕ 21.10.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ7:24(2016)

ವಿಷಯ: ಡಾ. ಪಿ.ಜಿ ಅಕ್ವಿನ್ಸ್, ಸಹ ಪ್ರಾಧ್ಯಾಪಕರು, ಸಮಾಜ ಕಾರ್ಯ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 06.10.2016ರಿಂದ 14.10.2016ರ ವರೆಗೆ Universiti Teknologi Malaysia ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪತ್ರಿಕೆ ಮಂಡಿಸಲು ಅನುಮತಿ ನೀಡುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಸದರಿಯವರಿಗೆ ದಿನಾಂಕ 06.10.2016 ರಿಂದ 14.10.2016ರ ವರೆಗೆ Universiti Teknologi Malaysia ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಭಾಗವಹಿಸಲು ಅನುಮತಿ ಮತ್ತು ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ7:25(2016)

ವಿಷಯ: ಡಾ. ಜಗದೀಶ್ ಪ್ರಸಾದ್ ಡಿ., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 10.11.2016ರಿಂದ 13.11.2016ರ ವರೆಗೆ Amsterdam, Netherlands ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕಾರ್ಯಾಗಾರದಲ್ಲಿ ಪತ್ರಿಕೆ ಮಂಡಿಸಲು ಅನುಮತಿ ನೀಡುವ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಸದರಿಯವರಿಗೆ ದಿನಾಂಕ 09.11.2016 ರಿಂದ 16.11.2016ರ ವರೆಗೆ Amsterdam, Netherlands ನಲ್ಲಿ ನಡೆಯುವ ಅಂತರರಾಷ್ಟ್ರೀಯ ಕಾರ್ಯಾಗಾರದಲ್ಲಿ ಪತ್ರಿಕೆ ಮಂಡಿಸಲು ಅನುಮತಿ ಹಾಗೂ ನಿಯಮಾನುಸಾರ ರೂ.60,000/– ಆರ್ಥಿಕ ಸಹಾಯದೊಂದಿಗೆ ಅಧಿಕೃತ ಕಾರ್ಯ ನಿಮಿತ್ತ ರಜಾ ಸೌಲಭ್ಯ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಕಾರ್ಯಾಗಾರದ ಶೈಕ್ಷಣಿಕ ಉಪಯುಕ್ತತೆಯ ಬಗ್ಗೆ ಸದರಿಯವರು ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ7:26(2016)

ವಿಷಯ: ಡಾ. ಜೆ. ಶಾಮ ಸುಂದರ್, ಸಹಾಯಕ ಪ್ರಾಧ್ಯಾಪಕರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ಸದರಿ ವಿಭಾಗದ ಅಧ್ಯಕ್ಷರಾದ ಡಾ. ಕೆ. ಕೃಷ್ಣ ಶರ್ಮ ಇವರ ಮೇಲೆ ಮಾಡಿರುವ ಆರೋಪಗಳ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದ ನಂತರ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

1. ಡಾ.ಸುಂದರ್ ನಾಯ್ಕ್, ಸಿಂಡಿಕೇಟು ಸದಸ್ಯರು
2. ಶ್ರೀ ಹರೀಶ್ ಆಚಾರ್, ಸಿಂಡಿಕೇಟು ಸದಸ್ಯರು
3. ಡಾ. ಪುಷ್ಪ ಕುಟ್ಟಣ್ಣ, ಸಿಂಡಿಕೇಟು ಸದಸ್ಯರು
4. ಡಾ.ಉದಯ .ಬಿ., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ

ಸದರಿ ಸಮಿತಿಯು ನವೆಂಬರ್ 8, 2016ರೊಳಗೆ ವರದಿಯನ್ನು ತಯಾರಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ7:27(2016)

**ವಿಷಯ:** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಇತ್ತೀಚೆಗೆ ನಡೆದಿರುವ ವಿದ್ಯಮಾನಗಳ ಪರಿಶೀಲನೆಗೆ ನಿಯೋಜಿಸಿರುವ ಸಮಿತಿಯ ವರದಿಯ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿಗೆ ಭೇಟಿ ನೀಡಿ ಅಲ್ಲಿ ನಡೆದ ಅಹಿತಕರ ಘಟನೆಗಳ ಕುರಿತು ವಿವಿಧ ವರ್ಗಗಳನ್ನು ಸಂದರ್ಶಿಸಿ ಸಲ್ಲಿಸಿದ ಪರಿಶೀಲನಾ ವರದಿಯನ್ನು ಸಿಂಡಿಕೇಟ್ ಸಭೆಯು ವಿಸ್ತೃತವಾಗಿ ಚರ್ಚಿಸಿತು. ಈ ಘಟನೆಗಳ ಬಗ್ಗೆ ಕಾಲೇಜಿನ ಪ್ರಾಂಶುಪಲರು ವಿಶ್ವವಿದ್ಯಾನಿಲಯಕ್ಕೆ ಕಾಲ ಕಾಲಕ್ಕೆ ತಾವು ತೆಗೆದುಕೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡದೆ ಇರುವುದು ಹಾಗೂ ಸಮಿತಿಯು ತನ್ನ ವರದಿಯಲ್ಲಿ ಉಲ್ಲೇಖಿಸಿದಂತೆ ಸಮನ್ವಯ ಇಲ್ಲದೆ ಇರುವುದು, ಅಲ್ಲದೆ ಸದ್ಯದಲ್ಲಿ ಕಾಲೇಜಿಗೆ ನ್ಯಾಕ್ ಉನ್ನತ ಸಮಿತಿಯು ಭೇಟಿ ನೀಡಲಿದ್ದು ಕಾಲೇಜಿನಲ್ಲಿ ಉಂಟಾಗುವ ಭಿನ್ನಮತದ ವಾತಾವರಣವು ಅದರ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಆತಂಕ ವ್ಯಕ್ತಪಡಿಸಿತು.

ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳು ಸಿಗುತ್ತಿವೆ ಎಂಬ ಸುದ್ದಿಯ ಬಗ್ಗೆ ಕೂಡ ಗಮನಹರಿಸಿದ ಸಭೆಯು ಕೊಡಗು ಜಿಲ್ಲಾ ಪೋಲಿಸ್ ಸುಪರಿಟೆಂಡೆಂಟ್‌ರಲ್ಲಿ ಈ ಕುರಿತು ದೂರನ್ನು ದಾಖಲಿಸಲು ಹಾಗೂ ಕಾಲೇಜಿನ ಪ್ರಾಂಶುಪಾಲರಿಗೆ ಪರಿಶೀಲನಾ ವರದಿಯನ್ನು ಕಳುಹಿಸಿ ಕಾರಣ ಕೇಳಿ ನೋಟೀಸನ್ನು ಜಾರಿಗೊಳಿಸಲು ಕುಲಸಚಿವರಿಗೆ ಸೂಚಿಸಿತು. ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಈ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಸಮಗ್ರ ವರದಿಯನ್ನು ಮಂಡಿಸಲು ಸೂಚಿಸಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ7:28 (2016)**

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ರವೀಂದ್ರ ಕಲಾಭವನ ಪಾರಂಪರಿಕ ಕಟ್ಟಡದ ನವೀಕರಣ ಬಗ್ಗೆ.

ಸಭೆಯ ದಿನಾಂಕ: 22.10.2016

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು ಮತ್ತು ಈ ಕುರಿತು INTACH, Bangalore ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಧರಿಸಲಾಯಿತು.

**<u>ಇತರ ವಿಷಯಗಳು:</u>**

1. ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಾಬ್ ಟೈಪಿಸ್ಟ್‌ಗಳ ಕ್ರೋಢೀಕೃತ ಮಾಸಿಕ ವೇತನವನ್ನು ರೂ.9000/- ದಿಂದ ರೂ. 10,000/-ಕ್ಕೆ ಅಕ್ಟೋಬರ್ 2016 ರಿಂದ ಜಾರಿಗೆ ಬರುವಂತೆ ಏರಿಸಲು ನಿರ್ಣಯ ಕೈಗೊಂಡಿತು.

2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಸಂಕೀರ್ಣ ಹಿಂಭಾಗದಲ್ಲಿ ಉಪನ್ಯಾಸ ಕೊಠಡಿಗಳ ಸಂಕೀರ್ಣ (ಲೆಕ್ಚರ್ ಹಾಲ್)ವನ್ನು ನಿರ್ಮಿಸುವುದರ ವಿರುದ್ಧ 'ಮೂಟ' (MUTA) ಸಂಘಟನೆಯು ವಿಶ್ವವಿದ್ಯಾನಿಯಕ್ಕೆ ನೀಡಿದ ಪತ್ರದ ಕುರಿತು ಚರ್ಚೆ ನಡೆಸಿತು. ಅಲ್ಲದೆ ಅದಕ್ಕೆ ಸಂಬಂಧಿಸಿದಂತೆ ನಡೆದ ಇತರ ಘಟನೆಗಳ ಕಡೆಗೂ ಗಮನಹರಿಸಿತು: ಪ್ರೊ.ಕೆ.ಎಂ.ಬಾಲಕೃಷ್ಣ, ಭೌತಶಾಸ್ತ್ರ ವಿಭಾಗ ಹಾಗೂ ಪ್ರೊ. ಬಾಲಕೃಷ್ಣ ಕಲ್ಲೂರಾಯ, ರಸಾಯನಶಾಸ್ತ್ರ ವಿಭಾಗ ಇವರು ದಿನಾಂಕ 18.10.2016ರಂದು ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿ ನಡೆಯುತ್ತಿದ್ದ ಕೆಲಸಕ್ಕೆ ಅಡ್ಡಿಯುಂಟು ಮಾಡಿರುವುದು ಹಾಗೂ ಈ ಕುರಿತು ಕಾರ್ಯಕಾರಿ ಅಭಿಯಂತರರು ನೀಡಿದ ವರದಿ;

   ಪ್ರೊ.ಕೆ.ಎಂ.ಬಾಲಕೃಷ್ಣರವರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ಕಾಮಗಾರಿ ವಿರುದ್ಧ ಮುಷ್ಕರ ಮಾಡುವುದಾಗಿ ಬೆದರಿಕೆಯನ್ನೊಡ್ಡಿರುವುದು;

   ಮಾನ್ಯ ಕುಲಪತಿಗಳು, ಪ್ರೊ.ಕೆ.ಎಮ್.ಬಾಲಕೃಷ್ಣರನ್ನು ಅಥವಾ MUTA ಪದಾಧಿಕಾರಿಗಳನ್ನು ಭೇಟಿ ಮಾಡಲು ನಿರಾಕರಿಸುತ್ತಿದ್ದಾರೆ ಎಂಬ ಸುಳ್ಳು ಸುದ್ದಿಯನ್ನು ಹರಡಿರುವುದು ಹಾಗೂ ಈ ಕುರಿತು ಸಿಂಡಿಕೇಟ್ ಸದಸ್ಯರಿಗೂ ಹೇಳಿರುವುದು;

   ಮಾನ್ಯ ಕುಲಪತಿಗಳು ಹಾಗೂ ಅಧಿಕಾರಿ ವರ್ಗದವರನ್ನು ಕುರಿತು ಆಧಾರ ರಹಿತ ಆರೋಪಗಳನ್ನು ಹೊರಿಸುತ್ತಿರುವುದು;

   ಅಲ್ಲದೆ ಕುಲಪತಿಗಳು ಕಾರ್ಯನಿಮಿತ್ತ ಕೇಂದ್ರಸ್ಥಾನದ ಹೊರಗಿದ್ದಾಗ ಅವರ ಬರುವಿಕೆಗೂ ಕಾಯದೆ, ಅವರೊಂದಿಗೆ ಚರ್ಚಿಸದೆ ಪತ್ರಿಕೆಗಳಿಗೆ ಸಂಸ್ಥೆಯ ಹೆಸರಿಗೆ ಧಕ್ಕೆಯುಂಟಾಗುವ ರೀತಿಯಲ್ಲಿ ಹೇಳಿಕೆಯನ್ನಿತ್ತಿರುವುದು;

   ಸಿಂಡಿಕೇಟ್ ಸಭೆಯು ಮೇಲಿನ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ವಿಸ್ತೃತವಾಗಿ ಚರ್ಚಿಸಿ, ಪ್ರೊ.ಕೆ.ಎಮ್.ಬಾಲಕೃಷ್ಣ ಹಾಗೂ ಪ್ರೊ. ಬಾಲಕೃಷ್ಣ ಕಲ್ಲೂರಾಯ ಇವರುಗಳ ವಿರುದ್ಧ ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಕ್ರಮಕೈಗೊಳ್ಳಲು ನಿರ್ಣಯಿಸಿ ಅವರಿಗೆ 'ಕಾರಣ ಹೇಳಿ' ನೋಟಿಸನ್ನು ನೀಡಲು ಸೂಚಿಸಿತು. ಅವರಿಂದ ವಿವರಣೆಗಳು ಬಂದನಂತರ ಮುಂದಿನ ಕ್ರಮಕೈಗೊಳ್ಳಲು ನಿರ್ಧರಿಸಿತು. ಅಲ್ಲದೆ ಮಾನ್ಯ ಕುಲಪತಿಗಳ ಕೋರಿಕೆಯ ಮೇರೆಗೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ವಿಜ್ಞಾನ ಸಂಕೀರ್ಣ ಕಟ್ಟಡದ ಹಿಂಬದಿಯಲ್ಲಿ ಉದ್ಯಾನವನಕ್ಕೆ ಸಾಕಷ್ಟು ಜಾಗ ನೀಡಿ ಅಲ್ಲಿ G+2 ಚೌಕಟ್ಟಿನ ಲೆಕ್ಚರ್ ಹಾಲನ್ನು ನಿರ್ಮಾಣ ಮಾಡಲು ಸಲಹೆ ನೀಡಿತು.

3. Applied Economics and Economics ವಿಷಯಗಳ ನಡುವೆ ಸಾಮತ್ಯೆಯನ್ನು ತರಲು Equivalence Committee ಯಲ್ಲಿ ವಿಷಯವನ್ನು ಮಂಡಿಸಲು ನಿರ್ಧರಿಸಲಾಯಿತು.

4. ಮುಂದಿನ ಸಿಂಡಿಕೇಟು ಸಭೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರದಲ್ಲಿ ನಡೆಸಲು ನಿರ್ಧರಿಸಲಾಯಿತು.

5. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗೆ ಮಾನ್ಯ ಕುಲಪತಿಯವರ ಆದೇಶದ ಮೇರೆಗೆ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಪ್ರಕಾರ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಶ್ರೀಮತಿ ಆ್ಯನೆಟ್ ಫ್ಲೋರೆನ್ಸ್, ಪ್ರಾಂಶುಪಾಲರು, ಶ್ರೀನಿವಾಸ ಕಾಲೇಜ್ ಆಫ್ ಹೋಟೇಲ್ ಮ್ಯಾನೇಜ್ ಮೆಂಟ್, ಪಾಂಡೇಶ್ವರ, ಮಂಗಳೂರು, ಶ್ರೀ ಎಸ್.ಎಂ.ಉಮಾಶಂಕರ್, ಪ್ರಾಂಶುಪಾಲರು, ಪ್ರಥಮ ದರ್ಜೆ ಕಾಲೇಜು, ಶನಿವಾರಸಂತೆ, ಕೊಡಗು ಮತ್ತು ಶ್ರೀ ಟಿ.ಜಯಾಪ್ರಕಾಶ್ ರಾವ್, ಪ್ರಾಂಶುಪಾಲರು, ಎ.ಜೆ.ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕೊಟ್ಟಾರ ಚೌಕಿ, ಮಂಗಳೂರು ಇವರುಗಳ ಸಿಂಡಿಕೇಟ್ ಸದಸ್ಯತ್ವದ ಒಂದು ವರ್ಷದ ಅವಧಿಯು ಕೊನೆಗೊಳ್ಳುವ ಹಿನ್ನೆಲೆಯಲ್ಲಿ ತಮ್ಮ ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಮಾನ್ಯ ಕುಲಪತಿಯವರು ಕೃತಜ್ಞತೆಯನ್ನು ಸಲ್ಲಿಸಿದರು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |